ಕ್ರಿಮೀನಲ್ ಮಿಸಲೇಯನ್ಸ . ನಂ. 95-2019

ದಿನಾಂಕಃ 28-02-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು ಃ ಎದುರುದಾರರ ಪರವಾಗಿ ಶ್ರೀ. ಎಮ್.ಸಿ.ಎಚ್ . ವಕೀಲರಿಂದಃ**

ನನಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು ಇರುತ್ತಾರೆ . ನನ್ನ ಮಗ ವಿಠ್ಠಲರವರಿಗೆ 40 ವರ್ಷ, ಇನ್ನೊಬ್ಬ ಮಗ ತುಕರಾಮಗೆ 45 ವರ್ಷ . ನನ್ನ ಹೆಣ್ಣು ಮಕ್ಕಳಾದ ಸತ್ಯವ್ವಗೆ 38 ವರ್ಷ, ಸಾವಿತ್ರಿಗೆ 30 ವರ್ಷ ಆಗಿರುತ್ತದೆ. ನನ್ನ ದೂಡ್ಡ ಮಗ ತುಕರಾಮ ಕೆ.ಪಿ.ಸಿ ಮನೆ ನಂಬರ 47 ಲೇನಿನ್ ರಸ್ತೆಯಲ್ಲಿ ವಾಸ ಇರುತ್ತಾರೆ. ಮನೆಯನ್ನು ಖರೀದಿ ಮಾಡಿದಾಗಿನಿಂದಲೂ ನಾವು ಅಲ್ಲಿಯೇ ವಾಸವಾಗಿದ್ದೇವೆ. ತುಕರಾಮರವರು ಮೊದಲಿಗೆ ರೆಸಾರ್ಟನಲ್ಲಿ ಕೆಲಸ ಮಾಡುತ್ತಿದ್ದು, ಈಗ ಆರೋಗ್ಯ ಸರಿಯಿಲ್ಲದ ಕಾರಣ ಈಗ ಏನು ಕೆಲಸ ಮಾಡುತ್ತಿಲ್ಲ.

2. ನನ್ನ 2 ನೇ ಮಗ ವಿಠ್ಠಲನು ಎಲ್.ಐ.ಸಿ ಯಲ್ಲಿ ಕೆಲಸ ಮಾಡುತ್ತಿದ್ದಾನೆ. ಅವರಿಗೆ ಎಷ್ಟು ಸಂಬಳ ಇದೆ ಎಂದು ನನಗೆ ಗೊತ್ತಿಲ್ಲ. ಸಾವಿತ್ರಿಯು ಶಾಲೆಯಲ್ಲಿ ಕೆಲಸ ಮಾಡುತ್ತಿದ್ದು, ಈಗ ಒಂದು ತಿಂಗಳುಗಳಿಂದ ಕೆಲಸ ಬಿಟ್ಟಿರುತ್ತಾರೆ. ನಾವು ವಾಸವಿರುವ 2 ಅಂತಸ್ತಿನ ಕೆ.ಪಿ.ಸಿ ಮನೆ 2007 ರಲ್ಲಿ ನನ್ನ ಪತಿ 2,43,000-00 ರೂಪಾಯಿಗೆ ತಮ್ಮ ಸ್ವಂತ ಹಣದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮೊದಲನೆ ಮಗಳು ಸತ್ಯವ್ವಳ ಮದುವೆಯನ್ನು ನಾವು ಮಾಡಿಕೊಟ್ಟಿರುವುದಿಲ್ಲ. ಆಕೆಯು ಮದುವೆಯಾಗಿ ಅವರ ಗಂಡನ ಮನೆ ಮೈಸೂರನಲ್ಲಿ ಇರುತ್ತಾರೆ. ಆಕೆಯ ಗಂಡ ಯಾವ ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಗಂಡ ಕೆ.ಪಿ.ಸಿಯಲ್ಲಿ ನೌಕರರಾಗಿದ್ದು, 2014 ಆಗಷ್ಟ ನಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ.

3. ನನ್ನ ಪತಿ ಟೌನ್‌ಶೀಫನಲ್ಲಿರುವ ಮನೆ ಸಂಃ 45/ಕೆ ನೇದ್ದನ್ನು ದಿಃ 17-04-2006 ರಲ್ಲಿ ಖರೀದಿಸಿರುತ್ತಾರೆ ಎಂದರೆ ಸರಿ. ನನ್ನ ಪತಿಗೆ ಎಷ್ಟು ಸಂಬಳ ಬರುತ್ತಿತು ಎಂದು ನನಗೆ ಗೊತ್ತಿಲ್ಲ. ಅವರಿಗೆ ಪಿಂಚಣಿ ಸಹ ಎಷ್ಟು ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಪತಿ ಸಿಂಡಿಕೇಟ ಬ್ಯಾಂಕ ದಾಂಡೇಲಿ ಯಲ್ಲಿ 5 ಲಕ್ಷ ಹಣವನ್ನು ನನ್ನ ಹಾಗೂ ಅವರ ಹೆಸರಿನಲ್ಲಿ 2015 ರಲ್ಲಿ ಮುದ್ದತ್ತ ಠೇವಣಿಯನ್ನು ಇಟ್ಟಿರುತ್ತಾರೆ ಎಂದರೆ ಸರಿ. ಅಂತೆಯೇ ಎಸ್.ಬಿ. ಐ ಬ್ಯಾಂಕ ದಾಂಡೇಲಿಯಲ್ಲಿ 5 ಲಕ್ಷ ಹಣವನ್ನು ನನ್ನ ಹಾಗೂ ಅವರ ಹೆಸರಿನಲ್ಲಿ 2015 ರಲ್ಲಿ ಮುದ್ದತ್ತ ಠೇವಣಿಯನ್ನು ಇಟ್ಟಿರುತ್ತಾರೆ ಎಂದರೆ ಸರಿ.

4. ನನ್ನ ಪತಿ ನನಗೆ ಸಾಕಷ್ಟು ಬಂಗಾರದ ಒಡವೆಗಳನ್ನು ಮಾಡಿಸಿಕೊಟ್ಟಿದ್ದಾರೆ ಎಂದರೆ ಸರಿ. ಆ ಎಲ್ಲಾ ಒಡವೆಗಳು ನನ್ನ ಬಳಿ ಇವೆ ಎಂದರೆ ಸರಿ. ನನ್ನ ಬಳಿ ಒಟ್ಟು ಅರ್ಧ ಕೆ.ಜಿ ಬಂಗಾರದ ಇದೆ ಎಂದರೆ ಸರಿಯಲ್ಲ. ಅಂತೆಯೇ ನಮ್ಮ ಹೆಣ್ಣು ಮಕ್ಕಳಿಗೂ ಸಹ ಬಂಗಾರವನ್ನು ಕೊಡಿಸಿರುತ್ತಾರೆ ಎಂದರೆ ಸರಿ. ನಿವೃತ್ತಿ ಹೊಂದಿದ ಬಳಿಕವೂ ಸಹ ನಮ್ಮ ಮನೆಗೆ ಬೇಕಾಗುವ ಸಾಮಾನುಗಳನ್ನು ನೀಡುತ್ತಿದ್ದರು ಎಂದರೆ ಸಾಕ್ಷಿಯು 1 ರಿಂದ 2 ವರ್ಷ ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

5. ನನ್ನ ಪತಿಯ ಹೊಲ ಶಿಂಗಣಪೂರ ಬಿಜಾಪುರ ದಲ್ಲಿ ಇರುತ್ತದೆ. ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಅಲ್ಲಿಗೆ ಹೋಗಿ ಸಾಗುವಳಿ ಮಾಡಿಲ್ಲ ಎಂದರೆ ಸರಿ. ಅವರ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸದ್ರಿ ಜಮೀನುಗಳನ್ನು ನನ್ನ ಪತಿ ಅವರ ಸಹೋದರರಿಗೆ ಬಿಟ್ಟುಕೊಟ್ಟಿರುತ್ತಾರೆ, ಅದರ ಉತ್ಪನ್ನಗಳನ್ನು ನಾವು ಪಡೆದುಕೊಳ್ಳುತ್ತಿಲ್ಲ ಎಂದು ನುಡಿಯುತ್ತಾರೆ .

6. ಟೌನ್ ಶೀಪನಲ್ಲಿ 2 ನೇ ಮಗ ವಿಠ್ಠಲ ಹಾಗೂ ಸೊಸೆ ಇರುತ್ತಾರೆ. ಸದ್ರಿ ಮನೆಯಲ್ಲಿ ಒಂದು ಭಾಗವನ್ನು ಬಾಡಿಗೆಗೆ ನೀಡಿದ್ದರೂ ಎಂದರೆ ಸಾಕ್ಷಿಯು ಮೊದಲಿಗೆ ನೀಡಿದ್ದು, ಈಗ ಒಂದು

ವರ್ಷದಿಂದ ಬಾಡಿಗೆಯನ್ನು ಬಿಡಿಸಿ ನನ್ನ ಮಗ ಎಲ್.ಐ. ಸಿ ಕಚೇರಿಯನ್ನು ಹೊಂದಿರುತ್ತಾನೆ. ಸದ್ರಿ ಬಾಡಿಗೆ ದರ ನನ್ನ ಖಾತೆಗೆ ಜಮಾ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಕೆನರಾ ಬ್ಯಾಂಕ ನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ಸದ್ರಿ ಬ್ಯಾಂಕ ಪಾಸ ಬುಕನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಪತಿ 8-9 ವರ್ಷಗಳಿಂದ ನಮ್ಮನ್ನು ಬಿಟ್ಟು ಮೈಸೂರಿನಲ್ಲಿ ವಾಸವಿದ್ದಾರೆ. ನಾನು ಮತ್ತು ಹಿರಿಯ ಮಗ ಸೇರಿ ಎದುರುದಾರರಿಗೆ ಲೇನಿನ್ ರಸ್ತೆಯಲ್ಲಿರುವ ಮನೆಯನ್ನು ಹಿರಿಯ ಮಗನ ಹೆಸರಿಗೆ ಮಾಡಿಕೊಡುವಂತೆ ಒತ್ತಾಯಿಸಿರುತ್ತೇವೆ ಎಂದರೆ ಸರಿಯಲ್ಲ.

7. ದಿಃ 12-02-2009 ರಂದು ಟೌನ್ ಶೀಪನಲ್ಲಿರುವ ಮನೆಯನ್ನು ಎದುರುದಾರರು ನನ್ನ ಹಗೆಸರಿಗೆ ನೋದಾಯಿತ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು , ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಈಗಾಗಲೇ ಮನೆ ಇದ್ದಲ್ಲಿ , ಅವರಿಗೆ ಕೆ.ಪಿ.ಸಿಯಿಂದ ಮನೆಯನ್ನು ಹಂಚಿಕೆ ಮಾಡಲಾಗುವುದಿಲ್ಲ ಎಂಬ ಉದ್ದೇಶದಿಂದ ಟೌನ್ ಶೀಪ ಮನೆಯನ್ನು ನನ್ನ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

8. ಟೌನ್ ಶೀಪನ ಮನೆಯನ್ನು ದಾನ ಪತ್ರವಾಗಿನಿಂದಲೂ ಸೀಮೆಂಟ ಅಂಗಡಿಗೆ ಬಾಡಿಗೆಯನ್ನು ನೀಡಲಾಗಿದೆ ಎಂದರೆ ಸರಿ. ಮಾಹೆ 10 ಸಾವಿರ ಬಾಡಿಗೆ ಮೊತ್ತವು ನನ್ನ ಖಾತೆಗೆ ಜಮೆ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸಧ್ಯಕ್ಕೆ ನನ್ನ ಖಾತೆಯಲ್ಲಿ 2-3 ಸಾವಿರ ಇರುತ್ತದೆ. 2017 ರಲ್ಲಿ ಎದುರುದಾರರ ಪಿಂಚಣಿ ಹಣವನ್ನು ಸಹ ನನ್ನ ಹಿರಿಯ ಮಗನಿಗೆ ನೀಡುವಂತೆ ಒತ್ತಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರು ಮನೆಯನ್ನು ಹಿರಿಯ ಮಗನ ಹೆಸರಿಗೆ ಮಾಡಿಕೊಡುವುದಿಲ್ಲ, ಹಾಗೂ ಪಿಂಚಣಿ ಹಣವನ್ನು ಸಹ ನಮಗೆ ನೀಡುವುದಿಲ್ಲ ಎಂದು ತಕಾರಾರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ , ಎದುರುದಾರರನ್ನು ನಾವು ಮನೆಯಿಂದ ಹೊರಗೆ ಹಾಕಲು ಪ್ರಯತ್ನಿಸಿರುತ್ತೇವೆ

ಎಂದರೆ ಸರಿಯಲ್ಲ. ಅದ ಕಾರಣ ಎದುರುದಾರರು ಮನೆ ತನ್ನದೇ ಎಂದು 2 ನೇ ಅಂತಸ್ತಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಸುಮಾರು 1 ವರ್ಷ ಕಾಲ 2 ನೇ ಅಂತಸ್ತಿನಲ್ಲಿ ವಾಸವಿದ್ದರು. ಅವರಿಗೆ ಊಟ ಅಡುಗೆಯನ್ನು ನಾನೇ ಮಾಡಿ ಕೊಡುತ್ತಿದ್ದೇನು. ನಾವು ಎದುರುದಾರರನ್ನು ಮನೆಯಿಂದ ಆಚೆ ಹೋಗಲು ಬಿಡದೇ ಮನೆಯಲ್ಲಿ ಕೂಡಿ ಹಾಕುತ್ತಿದ್ದೇವು ಎಂದರೆ ಸರಿಯಲ್ಲ. ದಿಃ 10-04-2014 ರಂದು ದಾಂಡೇಲಿ ನಗರ ಪೊಲೀಸ ಠಾಣೆಯಲ್ಲಿ , ಎದುರುದಾರರು ನಾನು ಹಾಗೂ ನನ್ನ ಮಕ್ಕಳು ಅವರಿಗೆ ಕಿರುಕುಳ ನೀಡುತ್ತಿದ್ದ ಬಗ್ಗೆ ಅರ್ಜಿಯನ್ನು ನೀಡಿರುತ್ತಾರೆ ಎಂದರೆ ಸರಿ ಆದರೆ ಕಿರುಕುಳ ನೀಡಿಲ್ಲ ಎಂದು ನುಡಿಯುತ್ತಾರೆ

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ., ದಾಂಡೇಲಿ